Mr. SPEAKER.—I invite the strongest language, but I will not permit insinuations and abuse. It is something different from criticism. Let them make it as strong as they like, but they should not abuse and pass personal insinuations. I will get that speech and read it. It was suggested as if the Ministers were taking bribes.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅವರು ಯಾರು ಎಂಬುದು ವೈಯಕ್ತಿಕವಾಗಿ ನಮಗೆ ನತ್ಯವಾಗಿಯೂ ಗೊತ್ತೇ ಇಲ್ಲ, ಸ್ವಾಮಿ ?

Mr. SPEAKER.—He says something which he does not mean. What I say is that the language used was something absolutely unhappy.

ಶ್ರೀ ಎ. ಕೃಷ್ಣಶೆಟ್ಟಿ.—ಈ 41 ಜನ ಹುಡುಗರಲ್ಲಿ ಮತ್ತು 6 ಜನ ಹುಡುಗಿಯರಲ್ಲಿ ಎಷ್ಟು ಜನ ಕೊರಗರು, ಎಷ್ಟು ಜನ ಪುಲೆಕುಡಿಯರು ಮತ್ತು ಎಷ್ಟು ಜನ ಮರಾಠಿ ನಾಯಕರು ಇದ್ದಾರೆ ?

ಶ್ರೀಮತಿ ಯಶೋಧರ ದಾಸಪ್ಪ.—ಆ ಅಂಶ ಪ್ರತ್ಯೇಕವಾಗಿಲ್ಲ.

ಶ್ರೀ ಜಿ. ಎ. ಗೌಡ.—ಕಡ್ಡಾಯ ಶಿಕ್ಷಣ ಜಾರಿಗೆ ಬಂದ ಮೇಲೆ ಪೆಡ್ಡೂರ್ಡ್ ಜ್ಯೆಬ್ಸ್‌ಗೆ ಸೇರಿದ ಶಾಲೆಗೆ ಹೋಗತಕ್ಕ ಎಲ್ಲಾ ಮಕ್ಕಳನ್ನೂ ಶಾಲೆಗೆ ಸೇರಿಸಲಾಗಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಅವರು ಕಾಡಿನಲ್ಲಿ ಮಧ್ಯೇ ಮಧ್ಯೇ ಸ್ಕೂಲ್ ಇಲ್ಲದೇ ಇರುವ ಜಾಗದಲ್ಲಿ ಇರುವುದರಿಂದ ಅವರಿಗೆ ಹೆಚ್ಚು ಹಾಸ್ಟಲುಗಳು ಮುಂತಾದ ಸೌಕರ್ಯಗಳನ್ನು ಕೊಟ್ಟು ಅವರು ಅಲ್ಲಿಗೆ ಓದುವುದಕ್ಕೆ ಬಂದರೆ ಸಾಧ್ಯವಾಗುತ್ತದೆಯೇ ಹೊರತು ಅವರು ಇರುವ ಕಡೆಯೇ ಕಡ್ಡಾಯ ಶಿಕ್ಷಣ ಜಾರಿ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಿ. ಎ. ಗೌಡ.—ಇಲ್ಲಿ ಹೇಳಿರುವ ಅನುಕೂಲಗಳನ್ನು ಒದಗಿಸಲು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಅವರಿಗಾಗಿ ಸ್ಕೂಲುಗಳನ್ನು ಸ್ಥಾಪನೆ ಮಾಡುವುದು ಇತರ ಸೌಕರ್ಯಗಳನ್ನು ಒದಗಿಸುವುದು ಈ ಕಾರ್ಯಗಳನ್ನೆಲ್ಲಾ ಮಾಡಲಾಗುತ್ತಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ವಿದ್ಯಾರ್ಥಿಗಳಿಗೆ ಈ ಸೌಕರ್ಯಗಳನ್ನು ಶಾಲಾ ಪ್ರಾರಂಭ ಕಾಲದಲ್ಲಿ ಒದಗಿಸಲಾಗುವುದೋ ಅಥವಾ ವರ್ಷದಾಖ್ಯೆರಿನಲ್ಲಿ ಒದಗಿಸಲಾಗುವುದೋ ?

ಶ್ರೀಮತಿ ಯಶೋಧರ ದಾಸಪ್ಪ.—ಅವುಗಳನ್ನೆಲ್ಲ ಶಾಲಾ ಪ್ರಾರಂಭ ಕಾಲದಲ್ಲೇ ಕೊಡುವುದಕ್ಕೆ ಏರ್ಪಾಡನ್ನು ಮಾಡಿದ್ದೇವೆ.

ಶ್ರೀ ಎ. ಕೃಷ್ಣಶೆಟ್ಟಿ.—ಈ 41 ಜನರಲ್ಲಿ ಕೊರಮರ ಹುಡುಗರು ಯಾರೂ ಇಲ್ಲ ಎಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಆ ಜಾತಿಯ ಮಕ್ಕಳಿದ್ದರೆ ತಿಳಿಸಲಿ ; ಅವರಿಗೂ ಅನುಕೂಲ ಮಾಡಲು ಸರ್ಕಾರ ಸಿದ್ಧವಿದೆ.

ಶ್ರೀ ಗೋಪಾಲ ಸಾರೆನ್ನ.—ಸೌತ್ ಕೆನರಾ ಜಿಲ್ಲೆಯಲ್ಲಿರುವಕ್ಕ ಈ ವರ್ಗದ ಮಕ್ಕಳಿಗೆ ಈಗ ಎಂದರೆ ಮಿಡಲ್ ಮತ್ತು ಹೈಸ್ಕೂಲ್‌ನಲ್ಲಿ ಓದತಕ್ಕ ಮಕ್ಕಳಿಗೆ ಪುಸ್ತಕ, ಬಟ್ಟೆ ಇತ್ಯಾದಿಗಳನ್ನು ಕೊಡುತ್ತಿಲ್ಲ ಎಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೆ ?

ಶ್ರೀಮತಿ ಯಶೋಧರ ದಾಸಪ್ಪ.—ಅವುಗಳಿಗೆಲ್ಲಕ್ಕೂ ಈಗ ಹಣದ ರೂಪದಲ್ಲಿ ಸಹಾಯವನ್ನು ನೀಡಲಾಗುತ್ತಿದೆ.

Visit of the Deputy Minister for Social Welfare to Tavarekere Village in Tumkur Taluk.

*Q.—409. Sri K. LAKKAPPA (Hebbur).—

Will the Government be pleased to state .—

(*a*) whether it is a fact that the Deputy Minister for Social Welfare visited Tavarekere Village, Hebbur Hobli, Tumkur Taluk on the 7th January 1963 with the Sub-Divisional Officer, Tumkur ;

(SRI K. LAKKAPPA)

(*b*) if so, the purpose for which the Deputy Minister visited the village and the matters in respect of which the Deputy Minister took decisions ?

A.—Smt. YASHODARA DASAPPA (Minister for Social Welfare).—

(*a*) Yes.

(*b*) To find out the desirability of acquiring sites in two places for the Scheduled Castes.

ಶ್ರೀ ಕೆ. ಲಕ್ಕಪ್ಪ.—ನಾನು ಇಲ್ಲ ಕೇಳಿರತಕ್ಕ ಪ್ರಶ್ನೆಯೇ ಒಂದು, ಕೊಟ್ಟರತಕ್ಕ ಉತ್ತರವೇ ಒಂದು. ಅಲ್ಲ ಉಪ ಮಂತ್ರಿಗಳು ಏನು ಪರಿಶೀಲನೆ ಮಾಡುವುದಕ್ಕೆ ಹೋಗಿದ್ದರು, ಯಾವ ರೀತಿ ಪರಿಶೀಲನೆ ನಡೆಸಿದರು ?

† ಶ್ರೀಮತಿ ಯಶೋಧರ ದಾಸಪ್ಪ.—ಆ ಸ್ಥಳವನ್ನು ಮೊದಲು ಅನುಸೂಚಿತ ಜಾತಿಯವರು ನಿವೇಶನಕ್ಕಾಗಿ ಬೇಕಂದು ಕೇಳಿದ್ದರು. ಈಗ ಬೇಕಿಲ್ಲ ಎಂದು ಹೇಳುತ್ತಿದ್ದರು. ಅದನ್ನು ಪರಿಶೀಲನೆ ಮಾಡಿಕೊಂಡು ಬರಲು ಉಪಮಂತ್ರಿಗಳು ಹೋಗಿದ್ದರು.

ಶ್ರೀ ಕೆ. ಲಕ್ಕಪ್ಪ.—ಅಲ್ಲಿಗೆ ಉಪಮಂತ್ರಿಗಳು ಹೋಗಿದ್ದುದು ಅವರು ಈಗ ಯಾವ ಸ್ಥಳವನ್ನು ಬೇಕಿಲ್ಲವೆಂದು ಹೇಳುತ್ತಿದ್ದಾರೋ ಅದೇ ಸ್ಥಳವನ್ನು ಅಕ್ವಯಿರ್ ಮಾಡುವಂತೆ ನಬ್-ಡಿವಿಜನ್ ಅಧಿಕಾರಿಗಳಿಗೆ ತಿಳಿಸುವುದಕ್ಕಾಗಿ ಅಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಮೊದಲು ಅದೇಸ್ಥಳ ಬೇಕೆಂದು ಕೇಳುತ್ತಿದ್ದರು.

Sri SANJEEVANATH AIKALA.—Are there no officers to find out the desirability of acquiring places suitable for the purpose ? Is it the function of the Deputy Minister to find out the suitability of acquiring particular places ?

ಶ್ರೀಮತಿ ಯಶೋಧರ ದಾಸಪ್ಪ.—ಅಲ್ಲ ಈ ಜನರಲ್ಲೇ ಏನಾದರೂ ಭಿನ್ನಾಭಿಪ್ರಾಯವಿದ್ದರೆ ಅಥವಾ ಜಮೀನನ್ನು ತೆಗೆದುಕೊಳ್ಳುವುದರಲ್ಲಿ ತೊಂದರೆಯೇನಾದರೂ ಇದ್ದರೆ ಅದನ್ನು ಸ್ಥಳನೋಡಿ ನಿರ್ಧರಿಸಬೇಕಾಗಿರುತ್ತದೆ. ಅದಕ್ಕಾಗಿ ಅವರು ಅಲ್ಲಗೆ ಹೋಗಿದ್ದರು.

ಶ್ರೀ ಜಿ. ಎ. ಗೌಡ.—ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸ್ಥಳೀಯ ಅಧಿಕಾರಿಗಳಿಗೆ ಸಾಧ್ಯವಾಗದೆ ವಿಫಲರಾದುದರಿಂದ ಇವರು ಅಲ್ಲಗೆ ಹೋಗಬೇಕಾಯಿತೆ ?

ಶ್ರೀಮತಿ ಯಶೋಧರ ದಾಸಪ್ಪ.—ಜಮೀನು ಕೇಳುತ್ತಿದ್ದ ಜನರಲ್ಲೇ ಭಿನ್ನಾಭಿಪ್ರಾಯ ಬಂದ ಕಾರಣ ಹೋಗಬೇಕಾಯಿತು.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ಉಪ ಸಚಿವರು ನಡೆಸಿದ ಪರಿಶೀಲನೆಯ ಫಲತಾಂಶವೇನು ?

ಶ್ರೀಮತಿ ಯಶೋಧರ ದಾಸಪ್ಪ.—ಆ ರೆಕಾರ್ಡಿನ್ನೂ ಬರ್ಲಿಪ್ ಆಗಿ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಉಪ ಮಂತ್ರಿಗಳ ಜೊತೆಯಲ್ಲಿ ತುಮಕೂರಿನ ಎಂ. ಎಲ್. ಎ. ಗಳು ಸಹ ಹೋಗಿದ್ದು ಅವರಿಗೆ ಇದೇ ಜಾಗವನ್ನು ಅಕ್ವಯಿರ್ ಮಾಡಿ ಎಂದು ಹೇಳಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

ಶ್ರೀಮತಿ ಯಶೋಧರ ದಾಸಪ್ಪ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಆ ರೀತಿ ತುಮಕೂರಿನ ಶಾಸನಸಭಾ ಸದಸ್ಯರು ಉಪ ಮಂತ್ರಿಗಳ ಜೊತೆಯಲ್ಲಿ ಹೋಗಿರಲಿಲ್ಲ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧಿಕಾರಿಗಳಿಗೆ ಬಾಯಿಮಾತಿನಲ್ಲಿ ತಿಳಿಸಿದರೆ ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೋ ಅಥವಾ ಬರವಣಿಗೆಯಲ್ಲಿ ಕೊಟ್ಟರೆ ಕಾರ್ಯಕ್ರಮ ಕೈಗೊಳ್ಳುತ್ತಾರೋ ?

ಶ್ರೀಮತಿ ಯಶೋಧರ ದಾಸಪ್ಪ.—ಬರವಣಿಗೆಯಲ್ಲಿ ತಿಳಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಆದೇಶವನ್ನು ಅನುಸರಿಸಿ ಪರಿಶೀಲನೆ ನಡೆಸಿ ನಿಮಗೆ ಅವರು ಒಪ್ಪಿಸಿದ ವರದಿಯೇನು ?

ಶ್ರೀಮತಿ ಯಶೋಧರ ದಾಸಪ್ಪ.—ಅದಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ರಾಜಕೀಯ ಕಾರಣದ ಮೇಲೆ ಒಬ್ಬ ಬಡವನ ಜಮೀನನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಅಲ್ಲವೇ ಈ ಉಪಮಂತ್ರಿಗಳು ಅಲ್ಲಿಗೆ ಹೋಗಿದ್ದುದು ?

ಶ್ರೀಮತಿ ಯಶೋಧರ ದಾಸಪ್ಪ.—ಯಾರಿಗೂ ತೊಂದರೆಯಾಗದಂತೆ ಕೆಲಸ ಮಾಡಬೇಕೆಂಬುದು ಸರ್ಕಾರದವರ ಆಶಯ.

ಶ್ರೀ ಜಿ. ವಿ. ಗೌಡ.—ಅಲ್ಲಿಯ ಜಿಲ್ಲಾಧಿಕಾರಿಗಳೂ, ಸಬ್-ಡಿವಿಜನ್ ಅಧಿಕಾರಿಗಳೂ ಆ ಜಾಗ ಸರಿಯಾಗಿಲ್ಲ ಎಂದು ಹೇಳಿದ ಮೇಲೂ ಅದೇ ಸ್ಥಳವನ್ನು ಆಕ್ಸಯಿರ್ ಮಾಡಬೇಕೆಂದು ಉಪಮಂತ್ರಿಗಳು ಅಲ್ಲಿಗೆ ಹೋಗಿದ್ದರೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಇಲ್ಲ.

Establishment of Agricultural College in Chickmagalur District.

*Q.—564. **Smt. B. L. SUBBAMMA** (Chickmagalur).—

Will the Government be pleased to state:—

(*a*) whether they intend to establish an Agricultural College in Chickmagalur District;

(*b*) whether it has come to their notice that all the requisite facilities are existing there to start such a College there ?

*A.—**Sri H. C. BORAIAH** (Parliamentary Secretary to Minister for Agriculture).—

(*a*) No.
(*b*) Yes.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇಲ್ಲಿ ಇಷ್ಟೆಲ್ಲ ಅನುಕೂಲತೆಗಳಿರುವುದರಿಂದ ಇಲ್ಲಿ ಒಂದು ವ್ಯವಸಾಯದ ಕಾಲೇಜನ್ನು ಸ್ಥಾಪನೆ ಮಾಡಲು ಆಲೋಚನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಮಾಡುವುದು ಒಳ್ಳೆಯದೆ. ಆದರೆ ಈಗ ಅದರ ಅವಶ್ಯಕತೆ ಇಲ್ಲ ಎಂದು ಅದನ್ನು ಕೈಬಿಡಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಗೊಂದು ವೇಳೆ ಕಾಲೇಜನ್ನು ಸ್ಥಾಪಿಸತಕ್ಕ ಅವಕಾಶ ಉಂಟಾದಾಗ ನಮ್ಮ ಚಿಕ್ಕಮಗಳೂರಿಗೆ ಮೊದಲು ಅವಕಾಶ ಕೊಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಅದನ್ನೂ ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸೌಲತ್ತನ್ನು ಉಪಯೋಗಿಸಿಕೊಳ್ಳಲು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಈ ಉಪಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಇಲ್ಲಿರತಕ್ಕ ಅನುಕೂಲಗಳೇನು ?

ಶ್ರೀ ಎಚ್. ಸಿ. ಬೋರಯ್ಯ.—ಉತ್ತಮವಾದ ಭೂಮಿ, ಸಾಕಷ್ಟು ಮಳೆ, ಕಾಲೇಜನ್ನು ಪ್ರಾರಂಭಮಾಡಲು ಕಟ್ಟಡಗಳು, ಅಲ್ಲಿ ಶ್ರೀಮಂತರಾದ ಕಾಫಿ ಪ್ಲಾಂಟರುಗಳು—ಇಷ್ಟೆಲ್ಲ ಅನುಕೂಲಗಳು ಇವೆ.

Sri SANJEEVANATH AIKALA.—Sir, if the Government do not propose to start a College here, will they permit private people to start either a College or an Agricultural University ?